# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ ಮತ್ತು ಹೆಸರು: ವಾರ್ಡ್–95, ಸುಭಾಷ್‌ನಗರ

ದಿನಾಂಕ:–25.02.2022 ರಂದು ವಾರ್ಡಿನ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ನಡೆದ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಸುರೇಶ್, ನೋಡೆಲ್ ಅಧಿಕಾರಿ ವಾರ್ಡ್–95
2. ಶ್ರೀ.ವಿ.ಮೋಹನ್, ಸಹಾಯಕ ಅಭಿಯಂತರರು ವಾರ್ಡ್–95
3. ಶ್ರೀ.ಎಸ್.ಶಂಕರ್, ಆರ್.ಐ ವಾರ್ಡ್–95
4. ಶ್ರೀ.ಲಕ್ಷ್ಮಣ್ ರಾವ್, ಹೆಲ್ತ್ ಇನ್ಸ್‌ಪೆಕ್ಟರ್, ವಾರ್ಡ್–95
5. ಶ್ರೀ.ರಾಜಣ್ಣ, ವಾರ್ಡ್–95

ದಿ:25.02.2022 ರಿಂದ ಬೆಳಿಗೆ 10.30 ಗಂಟೆಗೆ ವಾರ್ಡ್–95 ಸುಭಾಷ್‌ನಗರ ವಾರ್ಡ್ ಕಛೇರಿ ಕಸ್ತೂರಿನಗರ ಸಂಭಾಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿ ವಾರ್ಡ್–95 ಕಛೇರಿಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ವಾರ್ಡಿನ ಸಭೆಗೆ ಸ್ವಾಗತಿಸಿದರು.

ವಿಷಯ:– ವಾರ್ಡ್–95 ಸುಭಾಷ್‌ನಗರಕ್ಕೆ ಸಂಬಂಧಿಸಿದ ಅಂಗನವಾಡಿಯ ದುರಸ್ಥಿಯನ್ನು, ರಸ್ತೆ ಬದಿಯ ಕಲ್ಲು ಮಣ್ಣು ತೆಗೆಯುವ ಬಗ್ಗೆ ಹಾಗೂ ಸಾರ್ವಜನಿಕರು ಕುಡಿಯುವ ನೀರಿನ ಮತ್ತು ಬೀದಿ ದೀಪದ ದುರಸ್ಥಿಯ ಬಗ್ಗೆ ಕೋವಿಡ್–19 ತಡೆಗಟ್ಟುವ ಬಗ್ಗೆ ರಸ್ತೆ ಬದಿಯ ಮರಗಳು ಸಾರ್ವಜನಿಕರಿಗೆ ತೊಂದರೆ ಇದ್ದಲ್ಲಿ ತೆಗೆಯುವ ಬಗ್ಗೆ, ವಾರ್ಡ್‌ಗೆ ಸಂಬಂಧಿಸಿದಂತೆ ಅಂಗನವಾಡಿಯ ವಿವರ

➢ ಕಾಮಗಾರಿ ಇಲಾಖೆಗೆ ಸಂಬಂಧಿಸಿರುವುದು

1. ಹಿಂದಿನ ಸಭೆಯ ನಡುವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಗಿತ್ತು
2. ಸುಭಾಷ್‌ನಗರ ವಾರ್ಡ್–95ರ ವ್ಯಾಪ್ತಿಯಲ್ಲಿ ಕೆಲವು ಪ್ರದೇಶಗಳಲ್ಲಿ ಪಾಟ್‌ಹೋಲ್ಸ್‌ಗಳನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.
3. ಸುಭಾಷ್‌ನಗರ ವಾರ್ಡ್–95ರ ವ್ಯಾಪ್ತಿಯಲ್ಲಿ ಬರುವ 2021–22ನೇ ಸಾಲಿನ ಅನುದಾನದಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಬಗ್ಗೆ ಚರ್ಚಿಸಲಾಯಿತ್ತು ಹಾಗೂ ಅವುಗಳ ಅಂದಾಜುಪಟ್ಟಿ ತಾಯಾರಿಸಿ ಸೂಕ್ತ ಮಂಜೂರತಿ ಪಡೆಯಲು ಸೂಚಿಸಲಾಗಿರುತ್ತದೆ.
4. ಸುಭಾಷ್‌ನಗರ ವಾರ್ಡ್–95ರ ವ್ಯಾಪ್ತಿಯಲ್ಲಿ ಬರುವ ನಿರಾಶ್ರಿತರ ತಂಗುದಾಣ (Night Shelter) ಕಾಮಗಗಾರಿಯು ಪ್ರಗತಿಯಲ್ಲಿರುವ ಬಗ್ಗೆ ಸಭೆಗೆ ತಿಳಿಸಲಾಯಿತ್ತು.
5. ವಾರ್ಡ್–95ರ ರಸ್ತೆ ಬದಿಯ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಹಾಗೂ ಮೋರಿಗಳಲ್ಲಿ ತುಂಬಿರುವ ಮಣ್ಣು ಹಾಗೂ ಇತರೆ ತ್ಯಾಜ್ಯಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.
6. ವಾರ್ಡ್–95ರ ಸ್ವತಂತ್ರ್ಯಪಾಳ್ಯ 2ನೇ ಮುಖ್ಯರಸ್ತೆ ಹಗೂ ದ್ರೌಪದಮ್ಮ ದೇವಸ್ಥಾನದ ರಸ್ತೆಗಳಿಗೆ ಡಾಂಬರೀಕರಣವನ್ನು ಕೈಗೊಂಡು ಪೂರ್ಣಗೊಳಿಸಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಗಿರುತ್ತದೆ.

➢ ಆರೋಗ್ಯ ಇಲಾಖೆಗೆ ಸಂಬಂಧಿಸಿರುವುದು

1. ವಾರ್ಡ್-95ರ ಸುಭಾಷ್‌ನಗರ ವ್ಯಾಪ್ತಿಯಲ್ಲಿನ ಸಾರ್ವಜನಿಕರ ಶೌಚಾಲಯಗಳನ್ನು ಪ್ರತಿ ದಿನ ಸ್ವಚ್ಚಗೊಳಿಸಿ ದುರಸ್ಥಿಯನ್ನು ಸರಿಪಡಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಬಗ್ಗೆ ಸಂಬಂಧಪಟ್ಟ ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಗುತ್ತಿಗೆದಾರರಿಗೆ ಸೂಚಿಸಲಾಯಿತು.
2. ವಾರ್ಡ್-95ರ ವ್ಯಾಪ್ತಿಯಲ್ಲಿನ ತಾಜ್ಯ ಸಂಗ್ರಹಣೆಗೆ ಹಾಗೂ ನಿರ್ವಹಣೆಗೆ ಬಳಕೆಯಲ್ಲಿರುವ ವಾಹನಗಳ ದಿನನಿತ್ಯದ ದಿನಚರಿಯನ್ನು ನೋಡೆಲ್ ಅಧಿಕಾರಿಗಳು ಪರಿಶೀಲಿಸಿದರು.
3. ವಾರ್ಡ್-95ರ ಪೌರಕಾರ್ಮಿಕರಿಗೆ ಕೆಲಸ ನಿರ್ವಹಿಸಲು ದಿನನಿತ್ಯವಾದ ಸರಕರಣೆಗಳು ಹಾಗೂ ಅವರ ಆರೋಗ್ಯ ಕಾಪಾಡಿಕೊಳ್ಳಲು ಬೇಕಾಗಿರುವ ಮಾಸ್ಕ್, ಹ್ಯಾಂಡ್ ಗ್ಲೌಸ್ ಒದಗಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಯಿತು.

➢ ಪ್ರಾಥಮಿಕ ಆರೋಗ್ಯ ಕೇಂದ್ರ

1. ವಾರ್ಡ್-95 ಸುಭಾಷ್‌ನಗರ ಬೆಂಗಳೂರು ರಾಜ್ಯ ಯೋಜನಾ ವ್ಯಾಪ್ತಿಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಫಲಾನುಭವಿಗಳಿಗೆ ಪ್ರತಿ ಮಾಹಿತಿಗಳಿಗೆ ನೀಡಬೇಕಾದ ಒಂದು ತಿಂಗಳ ಅಹಾರ ಪದಾರ್ಥಗಳ ಪ್ರಮಾಣದ ವಿವರವನ್ನು ಹಾಜರಿದ್ದು ವೈಧಾಧಿಕಾರಿಗಳು ನೀಡಿದರು.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದ ಪಟ್ಟವರಿಗೆ ಸೂಚಿಸುತ್ತಾ, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸಿವಿಲ್ ಇಂಜಿನೀಯರ್ಸ್ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿರುತ್ತಾರೆ.

ನೋಡೆಲ್ ಅಧಿಕಾರಿ

ಸದಸ್ಯ ಕಾರ್ಯದರ್ಶಿ
ವಾರ್ಡ್-95